**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**<u>ಸೆಷನ್ಸ್ ಕೇಸ್ ನಂಃ 5/2023</u>** **ಅಸಾ.4**

**ಚಾಸಾ.2**

| | | |
|---|---|---|
| ಸಾಕ್ಷಿದಾರರ ಹೆಸರು | - | ಸಂಗೀತಾ ಸಾಲಿಯಾನ |
| ಗಂಡನ ಹೆಸರು | - | ಕೃಷ್ಣ ಸಾಲಿಯಾನ |
| ವಯಸ್ಸು | - | 52 ವರ್ಷ |
| ಉದ್ಯೋಗ | - | ಗೃಹಿಣಿ |
| ವಿಳಾಸ | - | ಬಜೆ |

ದಿನಾಂಕಃ 17-01-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ :</u>**

1. ಚಾಸಾ1 ನನ್ನ ತಂಗಿ. ಚಾಸಾ3 ನನ್ನ ಬಾವ. ಚಾಸಾ9 ನನ್ನ ಅಕ್ಕನ ಮಗ. ಮೃತ ಕೃತಿಕ್ ನನ್ನ ಅಣ್ಣನ ಮಗ. ಲಕ್ಷ್ಮೀ ಬಂಗೇರಾ ನನ್ನ ಸೋದರ ಮಾವನ ಹೆಂಡತಿ. ಆರೋಪಿಯು ನನ್ನ ಸೋದರ ಮಾವನ ಮೊಮ್ಮಗಳ ಗಂಡ. ಆರೋಪಿ ದಿನೇಶ ಸಪಲಿಗ ನಮ್ಮ ಮನೆಯ ಪಕ್ಕದಲ್ಲಿ ಇರುವ ಮನೆಯಲ್ಲಿ ವಾಸ ಮಾಡುತ್ತಾರೆ. ನನ್ನ ಅಣ್ಣ ಜಗನ್ನಾಥ್ ಸಾಲ್ಯಾನ್ ಈ ಹಿಂದೆ ಮುಂಬೈನಲ್ಲಿ ಕೆಲಸ ಮಾಡಿಕೊಂಡಿದ್ದರು ಮೃತ ಕೃತಿಕ್ ನನ್ನ ಅಣ್ಣ ಜಗನ್ನಾಥ ಸಾಲಿಯಾನ ಇವರ ಮಗ. ಕಳೆದ 21 ವರ್ಷಗಳಿಂದ ಅವರು ಊರಿಗೆ ಬಂದು ನಮ್ಮೊಂದಿಗೆ ವಾಸ ಮಾಡುತ್ತಿದ್ದರು. ಮೃತ ಕೃತಿಕ್ ನ ತಾಯಿ ಈ ಹಿಂದೆಯೇ ಮೃತ ಪಟ್ಟಿರುತ್ತಾರೆ. ತದನಂತರ ನನ್ನ ಅಣ್ಣ ಇನ್ನೊಂದು ಮದುವೆಯಾಗಿರುತ್ತಾರೆ. ಆಕೆಯೂ ಕೂಡ ಮೃತ ಪಟ್ಟಿರುತ್ತಾಳೆ. ಕೃತಿಕ್‌ನ ತಂದೆ ಅಂದರೆ ನನ್ನ ಅಣ್ಣ ಕಳೆದ ವರ್ಷ ಮೃತಪಟ್ಟಿರುತ್ತಾರೆ. ನಂತರ ಕೃತಿಕನು ನಮ್ಮ ಮನೆಯಲ್ಲಿ ಚಾ.ಸಾ.1 ರವರೊಂದಿಗೆ ವಾಸ ಮಾಡುತ್ತಿದ್ದನು. ಆತನು ಸ್ವಲ್ಪಮಟ್ಟಿನ ವಿದ್ಯಾಭ್ಯಾಸ ಹೊಂದಿದ್ದು ಡೈರಿಗೆ ಹಾಲು ತೆಗೆದುಕೊಂಡು ಹೋಗುತ್ತಿದ್ದ. ಕೃತಿಕ್ ನ ತಂದೆ ಮೃತ ಪಡುವ ಸಮಯದಲ್ಲಿ ಅವರ ಹೆಸರಿನಲ್ಲಿ ಬ್ಯಾಂಕಿನಲ್ಲಿ ಹಣ ಇಟ್ಟಿದ್ದು, ಕೃತಿಕ್ ನ ಹೆಸರಿಗೆ ನಾಮಿನಿ ಮಾಡಿದ್ದರು.

2. ಕೃತಿಕ್‌ನು ಆರೋಪಿಯನ್ನು ಬಿಟ್ಟರೆ ಬೇರೆ ಯಾರೊಂದಿಗೂ ಸ್ನೇಹ ಇಟ್ಟು ಕೊಂಡಿರಲಿಲ್ಲ. ಆರೋಪಿಯು ಲಕ್ಷ್ಮೀ ಬಂಗೇರಾ ಇವರ ಕುಮುಕಿ ಜಾಗದಲ್ಲಿ ಹೊಸ ಮನೆಯನ್ನು ಕಟ್ಟಲು ಪ್ರಾರಂಭಿಸಿದ್ದರು. ಅದಕ್ಕಾಗಿ ಆರೋಪಿಯು ಕೃತಿಕ್‌ನ ತಂದೆಯಿಂದ ನಾಲ್ಕು ಲಕ್ಷ ಹಣ ಪಡೆದುಕೊಂಡಿದ್ದರು.

3. ಚಾಸಾ13 ಶಾರದ ಈಕೆಯ ಪರಿಚಯ ಇದೆ. ಆಕೆಯು ತನ್ನ ಗಂಡನ ಮನೆಯಲ್ಲಿ ವಾಸ ಮಾಡುತ್ತಿದ್ದಳು. ಆರೋಪಿ ನಂತರದಲ್ಲಿ ಬ್ರಹ್ಮಾವರದಲ್ಲಿ ಮಾಂಸಾಹಾರಿ ಹೋಟೇಲ್ ನಡೆಸುತ್ತಿದ್ದನು. ಕೃತಿಕ್ ನು ಆರೋಪಿಯ ಹೋಟೆಲ್ ಗೆ ಹೋಗಿ ಬಂದು ಮಾಡುತ್ತಿದ್ದನು. ಮೃತ ಕೃತಿಕನು ಚಾಸಾ13 ರೊಂದಿಗೆ ಸಲುಗೆಯಿಂದ ಮಾತನಾಡುತ್ತಿದ್ದ ಕಾರಣ ಆಕೆಯ ಗಂಡ ಅನುಮಾನಗೊಂಡು ಆಕ್ಷೇಪಿಸಿದ್ದು, ಈ ಬಗ್ಗೆ ನಾನು ಕೃತಿಕ್ ನಿಗೆ ಬುದ್ದಿ ಹೇಳಿದ್ದೇನು. ನನ್ನ ಅಣ್ಣ ಜಗನ್ನಾಥ ಸಾಲಿಯಾನ ತೀರಿ ಹೋದ ಮೇಲೆ ಅಣ್ಣನ ಹೆಸರಿನಲ್ಲಿದ್ದ ಹಣ ಕೃತಿಕ್ ನ ಹೆಸರಿನಲ್ಲಿ ಠೇವಣಿ ಮಾಡಲಾಗಿತ್ತು.

4. ದಿನಾಂಕ 14.09.2022 ರಂದು ನಾನು ಬಾಂಬೆಯ ನಮ್ಮ ಮನೆಯಲ್ಲಿದ್ದಾಗ ಬೆಳಿಗ್ಗೆ 8 ಗಂಟೆಗೆ ಹೇಮಲತಾ ಎಂಬುವರು ದೂರವಾಣಿ ಕರೆ ಮಾಡಿ ಕೃತಿಕ್ ಎಂಬುವನು ನಮ್ಮ ಮನೆಯ ಹತ್ತಿರದ ಹಾಡಿಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುತ್ತಾನೆಂದು ತಿಳಿಸಿರುತ್ತಾರೆ. ವಿಚಾರ ತಿಳಿದ ನಾವು ನಾನು, ನನ್ನ ಭಾವ ಮತ್ತು ಬಾಂಬೆಯಲ್ಲಿರುವ ನಮ್ಮ ಸಂಬಂಧಿಕರು ಊರಿಗೆ ಬಂದಿರುತ್ತೇವೆ. ಮನೆಗೆ ಬಂದು ವಿಚಾರ ತಿಳಿಯಲಾಗಿ, ರಾತ್ರಿ ಬಂದು ಮಲಗಿದ್ದ ಕೃತಿಕ್ ಬೆಳಿಗಿನ ಜಾವ 4.45 ಗಂಟೆಗೆ ಮೂತ್ರ ಮಾಡುತ್ತೇನೆಂದು ಹೇಳಿ ಟಾರ್ಚ್ ತೆಗೆದುಕೊಂಡು ಹೋಗಿದ್ದು, ಬೆಳಿಗ್ಗೆ ಎದ್ದು ನೋಡಿದಾಗ ಕೃತಿಕ್ ಮನೆಯಲ್ಲಿ ಇಲ್ಲದೆ ಇದ್ದು ಅಕ್ಕಪಕ್ಕದಲ್ಲಿ ವಿಚಾರಿಸಿದಾಗ ಹಾಗೂ ಹುಡುಕಾಡಿದಾಗ ಪಕ್ಕದ ಲಕ್ಷ್ಮಿ ಮರಕಾಲತಿ ಅವರ ಮನೆಯ ಹಾಡಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ತಿಳಿಸಿರುತ್ತಾರೆ. ನಂತರ ಮೃತ ದೇಹವನ್ನು ನಾವು ಪಡೆದುಕೊಂಡು ಆತನ ಅಂತ್ಯ ಸಂಸ್ಕಾರ ಮಾಡಿರುತ್ತೇವೆ. ನಂತರ ವಿಚಾರ ತಿಳಿಯಲಾಗಿ ಆತ ಆತ್ಮಹತ್ಯೆ ಮಾಡಿಕೊಂಡ ಪರಿಸ್ಥಿತಿಯ ಬಗ್ಗೆ ಕೂಲಂಕುಷವಾಗಿ ನೋಡಿದಾಗ ಮತ್ತು ಆತನ ಮೊಬೈಲ್ ಸಿಗದೆ ಇದ್ದುದ್ದರಿಂದ ಹಾಗೂ ಬ್ಯಾಂಕಿನ ದಾಖಲೆಗಳನ್ನು ಪರಿಶೀಲಿಸಿದಾಗ ಲಕ್ಷಾಂತರ ರೂಪಾಯಿ ಹಣ ಡ್ರಾ ಆಗಿರುವುದರಿಂದ ಆತನ ಸಾವಿನ ಬಗ್ಗೆ ನನಗೆ ಸಂಶಯ ಬಂದು ದಿನಾಂಕ 18.09.2022 ರಂದು ದೂರನ್ನು ದಾಖಲಿಸಿರುತ್ತೇನೆ. ಸದಿರ ದೂರನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ 13 ಎಂದು,

ಸಾಕ್ಷಿಯ ಸಹಿಯನ್ನು ನಿ.ಪಿ 13(ಎ) ಎಂದು ಗುರುತಿಸಲಾಯಿತು. ನಾನು ನನ್ನ ಸದ್ರಿ ದೂರನ್ನು ಆರೋಪಿಯ ವಿರುದ್ಧ ನೀಡಿದ್ದು, ಆರೋಪಿ ಈ ಹಿಂದೆ ಮೃತ ಕೃತಿಕನಿಂದ ಸಾಲ ಪಡೆದುಕೊಂಡಿದ್ದು ಹಾಗೂ ಹಂತ ಹಂತವಾಗಿ ಮೃತ ಕೃತಿಕ್ ನ ಅಕೌಂಟಿನಲ್ಲಿದ್ದ ಹಣವನ್ನು ಆರೋಪಿ ಪಡೆದುಕೊಂಡಿರುವುದು ಗೊತ್ತಾದ ಕಾರಣ ಆರೋಪಿ ಮೇಲೆ ನಾನು ಈ ದೂರನ್ನು ಸಲ್ಲಿಸಿರುತ್ತೇನೆ. ಸುಮಾರು ಒಂದು ತಿಂಗಳ ನಂತರ ಹಿರಿಯಡ್ಕ ಪೊಲೀಸ ಠಾಣೆಗೆ ಪೊಲೀಸ ನಮ್ಮನ್ನು ಕರೆದಿದ್ದು, ನಾನು ಚಾ.ಸಾ 1 ಮತ್ತು ಸಂಬಧಿಕ ಠಾಣೆಗೆ ಹೋಗಿದ್ದೇವು. ಆ ಸಮಯದಲ್ಲಿ ಆರೋಪಿ ಠಾಣೆಯಲ್ಲಿದ್ದು, ಆತನನ್ನು ಠಾಣೆಯಲ್ಲಿರುವ ಪೊಲೀಸರು ವಿಚಾರಿಸುತ್ತಿದ್ದರು. ಆಗ ಆರೋಪಿ ನಮ್ಮ ಮುಂದೆ ಕೃತಿಕ್ ನಿಂದ ತಾನು ಹಣ ಪಡೆದುಕೊಂಡ ಕಾರಣದಿಂದ ಮತ್ತು ಹಿಂತಿರುಗಿಸುವ ಉದ್ದೇಶವನ್ನು ಹೊಂದದೆ ಮತ್ತು ಶಾರದಾಳ ಜೊತೆ ಅನೈತಿಕ ಸಂಬಂಧಿ ಇರುವ ಕಾರಣದಿಂದ ಆತನನ್ನು ನಾನೇ ಕೊಲೆ ಮಾಡಿರುತ್ತೇನೆಂದು ಒಪ್ಪಿಕೊಂಡ ಕಾರಣ ಇನ್ನೊಂದು ದೂರನ್ನು ದಾಖಲಿಸಿರುತ್ತೇನೆ. ಸದ್ರಿ ದೂರನ್ನು ಈಗ ನೋಡುತ್ತಿದ್ದು ನಿ.ಪಿ 14 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ 14(ಎ) ಎಂದು ಗುರುತಿಸಲಾಯಿತು.

5. ನಂತರ ಪೊಲೀಸರು ನನ್ನನ್ನು ಬ್ರಹ್ಮಾವರ ವೃತ್ತ ನಿರೀಕ್ಷಕರ ಕಚೇರಿಗೆ ಕರೆಯಿಸಿದ್ದರು. ಆರೋಪಿ ಸದ್ರಿ ದಿನ ಠಾಣೆಯಲ್ಲಿದ್ದ. ಆ ಸಮಯದಲ್ಲಿ ಪೊಲೀಸರು ಆರೋಪಿಯ ಮೊಬೈಲ್ ನ್ನು ಪರಿಶೀಲಿಸಿದ್ದು, ಆರೋಪಿ ಕೃತಿಕ್ ನ ಜೊತೆ ಮಾಡಿದ 14 ಸಂಭಾಷಣೆಗಳಿದ್ದು, ಕೃತಿಕ್ ನಿಗೆ ಹುಡುಗಿ ನೋಡುವ ವಿಚಾರಕ್ಕೆ ಸಂಬಂಧಿಸಿದಂತೆ, ಶಾರದಳ ವಿಚಾರಕ್ಕೆ ಸಂಬಂಧಿಸಿದಂತೆ, ಸೊಸೈಡ್ ಮಾಡಿಕೊಳ್ಳುವ ವಿಡಿಯೋ ಮಾಡುವ ಬಗ್ಗೆ ಸಂಭಾಷಣೆಗಳಿದ್ದವು. ಪೊಲೀಸರು ಸದ್ರಿ ಸಂಭಾಷಣೆಗಳನ್ನು ದಾಖಲೆಯಲ್ಲಿ ಬರೆದಿರುತ್ತಾರೆ. ಆರೋಪಿಯ ಧ್ವನಿ ಸಂಗ್ರಹಣೆಯನ್ನು ಮಾಡಿರುತ್ತಾರೆ. ಈ ಬಗ್ಗೆ ವಿವರವಾದ ಪಂಚನಾಮೆಯನ್ನು ಬರೆದು ನನ್ನ ಸಹಿ ಪಡೆದುಕೊಂಡಿರುತ್ತಾರೆ. ಅದನ್ನು ಈಗಾಗಲೇ ನಿ.ಪಿ 9 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು 9(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಚಾಯಾಚಿತ್ರ ತೆಗೆದಿದ್ದು, ಅವುಗಳನ್ನು ಈಗಾಗಲೇ ನಿ.ಪಿ 10 ಎಂದು ಗುರುತಿಸಲಾಗಿದೆ. ಸಂಭಾಷಣೆಗಳನ್ನು ಸಂಗ್ರಹಿಸಿದ ಡಿ.ವಿ.ಆರ್ ನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ಮುದ್ದೆಮಾಲು 1 ಎಂದು ಗುರುತಿಸಲಾಗಿದೆ.

**ಪಾಟೀಸವಾಲುಃ ಆರೋಪಿಯ ಪರ ವಕೀಲರಿಂದ**

ನನ್ನ ಅಣ್ಣ, ಅತ್ತಿಗೆ ಮತ್ತು ಅವರ ಮಗ ತೀರಿಹೋದ ನಂತರ ಎಲ್ಲಾ ಆಸ್ತಿಗಳು ನಮಗೆ ಬಂದಿರುತ್ತವೆ ಎಂದರೆ ಸರಿ. ಬ್ಯಾಂಕಿನಲ್ಲಿ ಕೃತಿಕ ನ ಹೆಸರಿನಲ್ಲಿದ್ದ ಲಾಕರ್ ನಲ್ಲಿ ಇದ್ದ ಚಿನ್ನವನ್ನು ನನ್ನ ಅಕ್ಕನ ಮಗಳಾದ ಮೀನಾಕ್ಷಿಯನ್ನು ನಾಮಿನಿ ಮಾಡಿರುತ್ತಾರೆ. ಮೃತ ಆಂಗ್ಲ ಮಾಧ್ಯಮದಲ್ಲಿ ಪದವಿ ಮಾಡಿರುತ್ತಾನೆ. ಮೃತ ತನ್ನ ಎಲ್ಲಾ ವ್ಯವಹಾರಗಳನ್ನು ತನ್ನ ಸ್ವಂತ ಜವಾಬ್ದಾರಿಯಿಂದ ತೆಗೆದುಕೊಳ್ಳುತ್ತಿದ್ದನು. ಮೃತ ತನ್ನ ತಂದೆ ತಾಯಿಯ ಮರಣದ ನಂತರ ಮಾನಸಿಕವಾಗಿ ಕುಗ್ಗಿದ್ದ ಎಂದರೆ ಸರಿ. ಆತ ಒಮ್ಮೆ ಇಲಿ ಪಾಷಣವನ್ನು ತೆಗೆದುಕೊಳ್ಳಲು ಪ್ರಯತ್ನ ಪಟ್ಟಿದ್ದನು ಎಂದರೆ ಸರಿ. ಆತ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನ ಪಟ್ಟ ಬಗ್ಗೆ ಗೊತ್ತಿಲ್ಲ. ಮೃತನಿಗೆ ಸಂಬಂಧಿಕರ ಮನೆಯಲ್ಲಿ ವಾಸ ಮಾಡಲು ಇಷ್ಟ ಇರಲಿಲ್ಲ ಎಂಬುದು ಗೊತ್ತಿಲ್ಲ. ಮೃತ ಮದ್ಯಪಾನ ಮಾಡುತ್ತಿದ್ದನು ಎಂದರೆ ಸರಿ.

2. ನನ್ನ ತಂಗಿ ಶೈಲಾ ನನಗೆ ಕೃತಿಕ್ ನು ಜಾಸ್ತಿ ಮದ್ಯಪಾನ ಮಾಡಿಕೊಂಡು ಬಂದು ಊಟ ಮಾಡದೆ ಮಲಗಿದ್ದಾನೆ ಎಂದು ಹೇಳಿರುತ್ತಾರೆ. ಮೃತನಿಗೆ ಶಾರದಾ ಮತ್ತು ಪ್ರಮೀಳಾ ಇವರ ಜೊತೆಯಲ್ಲಿ ಸಂಬಂಧ ಇತ್ತು ಎಂದರೆ ಸರಿ. ಆತ ಅವರಿಗೆ ಹಣ ಖರ್ಚು ಮಾಡುತ್ತಿದ್ದ ಎಂದರೆ ಸರಿ. ಪ್ರಮೀಳಾಳಿಗೆ ಒಂದು ಬಂಗಾರವನ್ನು ಕೊಟ್ಟಿದ್ದ ಎಂದರೆ ಸರಿ. ಆತನಿಗೆ ಕೆಲಸ ಇರಲಿಲ್ಲ. ಅವನ ದುಶ್ಚಟಗಳಿಗೆ ತನ್ನದೇ ಆದ ಹಣವನ್ನು ಖರ್ಚು ಮಾಡುತ್ತಿದ್ದ ಎಂದರೆ ಸರಿ. ಶಾರದಾಳ ಜೊತೆ ಇರುವ ಮೃತನ ಸಂಬಂಧ ಆಕೆಯ ಗಂಡನಿಗೆ ಗೊತ್ತಾಗಿ, ಆತ ನಮ್ಮ ಮನೆಗೆ ಬಂದು ಗಲಾಟೆ ಮಾಡಿದ್ದಾನೆ ಎಂದರೆ ಸರಿ. ಆ ಕಾರಣಕ್ಕೆ ಕೃತಿಕ್ ನಿಗೆ ಬೇಜಾರಾಗಿತ್ತು ಎಂದರೆ ಸರಿ.

3. ಮೃತ ತಾನು ಖರ್ಚು ಮಾಡುತ್ತಿದ್ದ ಹಣದ ಬಗ್ಗೆ ಲೆಕ್ಕಾಚಾರ ಇಡುತ್ತಿದ್ದನೋ ಇಲ್ಲ ಗೊತ್ತಿಲ್ಲ. ಆತ ಒಂದು ಮೋಟಾರ ಸೈಕಲ್ ಖರೀದಿ ಮಾಡಿದ್ದ. ಆತ ಯಾವ ಯಾವುದಕ್ಕೆ ಹಣ ಖರ್ಚು ಮಾಡಿದ್ದಾನೆ ನನಗೆ ಗೊತ್ತಿಲ್ಲ. ಆತ ಯಾವುದೇ ವಿಚಾರವನ್ನು ನನ್ನ ಬಳಿ ನೇರವಾಗಿ ಹೇಳುತ್ತಿರಲಿಲ್ಲ.ಚಾ.ಸಾ.1 ರವರ ಜೊತೆ ಮೃತ ಚಿಕ್ಕಂದಿನಿಂದಲೂ ಇದ್ದ ಆಕೆಯು ಆತನಿಗೆ ಯಾವಾಗಲೂ ಬುದ್ದಿ ಹೇಳುತ್ತಿದ್ದರು, ಆದರೆ ಆತ ಕೇಳುತ್ತಿರಲಿಲ್ಲ. ಆ ರೀತಿ ಪ್ರತಿಯೊಂದಕ್ಕೂ ಬುದ್ದಿ ಹೇಳುವ ಕಾರಣಕ್ಕೆ ಕೃತಿಕ್ ನಿಗೆ ಬೇಸರ ಇತ್ತು ಎಂದರೆ ಸರಿ.

4. ಪೊಲೀಸ ಠಾಣೆಗೆ ನಾವು ದಿನಾಂಕ 15ರಂದು 7-8 ಜನ ಹೋಗಿದ್ದೇವು. ಈ ಪ್ರಕರಣಕದ ಬಗ್ಗೆ ನಾನು ಹಿರಿಯಡ್ಕ ಪೊಲೀಸ ಠಾಣೆಗೆ 3-4 ಬಾರಿ ಹೋಗಿದ್ದೇನೆ. ನಿ.ಪಿ.13ರಲ್ಲಿ

ನನ್ನ ಅಕ್ಕನ ಮಗ ಪ್ರಶಾಂತ ಉಡುಪಿಯಲ್ಲಿ ಬೆರಳಚ್ಚು ಮಾಡಿಸಿಕೊಂಡು ಬಂದಿದ್ದಾನೆ. ಆ ದಿನ ಠಾಣೆಗೆ ನಾವು ಬೆಳಿಗ್ಗೆ 9 ಗಂಟೆಗೆ ಹೋಗಿದ್ದೇವು. ಆ ದಿನ ನಾವು ಠಾಣೆಯಲ್ಲಿ ಸುಮಾರು 12.00 ಗಂಟೆಯವರೆಗೂ ಇದ್ದೇವು. ಪುನಃ ಠಾಣೆಗೆ ಎರಡು ದಿನ ಬಿಟ್ಟು ಹೋಗಿರುತ್ತೇವೆ. ದಿನಾಂಕ 18.09.2022 ರಂದು ಠಾಣೆಗೆ ಹೋದಾಗ ದೂರನ್ನು ಅಕ್ಕನ ಮಗ ಪ್ರಶಾಂತ ಬರೆದುಕೊಂಡು ಬಂದಿದ್ದನು. ನಂತರ ಒಂದು ತಿಂಗಳ ನಂತರ ನಾನು ಯಾವುದೇ ದೂರನ್ನು ದಾಖಲಿಸಿಲ್ಲ. ಒಂದು ತಿಂಗಳ ನಂತರ ಠಾಣೆಗೆ ನಾವು 7-8 ಜನ ಹೋಗಿದ್ದೇವು. ಠಾಣೆಗೆ ಹೋದಾಗ ಸಮಯ ಬೆಳಿಗ್ಗೆ 10.00 ಗಂಟೆ ಆಗಿತ್ತು. ಆ ದಿನ ಠಾಣೆಯಲ್ಲಿ ನನ್ನ ಸಹಿಗಳನ್ನು ಪಡೆದುಕೊಂಡಿರುತ್ತಾರೆ. ನಾನು ನಾವು ಸಹಿ ಮಾಡಿದ ದಾಖಲೆಗಳಲ್ಲಿ ಏನು ಬರೆದಿದೆ ಎಂದು ಗೊತ್ತು. ಸದ್ರಿ ದಾಖಲೆಗಳನ್ನು ಪೊಲೀಸರೆ ಬೆರಳಚ್ಚು ಮಾಡಿರುತ್ತಾರೆ.

5. ಬ್ರಹ್ಮಾವರ ಠಾಣೆಗೆ ನಾವು 5-6 ಜನ ಹೋಗಿದ್ದೇವು. ನಾನು, ಪ್ರಶಾಂತ, ಶೈಲಜಾ, ಕುಟ್ಟಿ ಕುಂದರ, ರವಿ ಕರ್ಕೆರಾ ಠಾಣೆಗೆ ಬೆಳಿಗ್ಗೆ 10.00 ಗಂಟೆಗೆ ಹೋಗಿ ಮಧ್ಯಾಹ್ನ 1.30 ರವರೆ ಇದ್ದೇವು. ಹಿರಿಯಡ್ಕ ಠಾಣೆಗೆ ಹೋದ ಒಂದು ವಾರದ ನಂತರ ಬ್ರಹ್ಮಾವರ ಠಾಣೆಗೆ ಹೋಗಿರುತ್ತೇವೆ. ಬ್ರಹ್ಮಾವರ ಠಾಣೆಯಲ್ಲಿ ನಮ್ಮ ಸಹಿಗಳನ್ನು ಪಡೆದುಕೊಂಡಿದ್ದಾರೆ. ಠಾಣೆಯಲ್ಲಿ 10-15 ಜನ ಪೊಲೀಸರು ಇದ್ದರು. ಠಾಣೆಯಲ್ಲಿ ದಾಖಲೆಗಳನ್ನು ಯಾರು ಬರೆದಿದ್ದಾರೆ ಹೇಳಲೂ ಆಗುವುದಿಲ್ಲ. ಸಂಭಾಷಣೆಗಳನ್ನು ನಮಗೆ ಸ್ಪೀಕರ್ ಹಾಕಿ ಕೇಳಿಸಿದ್ದಾರೆ. ನನಗೆ ತುಳು, ಮರಾಠಿ, ಕನ್ನಡ ಭಾಷೆ ಬರುತ್ತದೆ. ಸಂಭಾಷಣೆಯಲ್ಲಿ ಶಾರದಾಳ ಸಂಭಾಷಣೆ ಇರಲಿಲ್ಲ. ಪ್ರಮೀಳಾಳ ಸಂಭಾಷಣೆ ಇದೆ ಎಂದು ಹೇಳಿದ್ದಾರೆ. ಆದರೆ, ನಾನು ಆಕೆಯ ಸಂಭಾಷಣೆಯನ್ನು ಕೇಳಿಲ್ಲ. ನಮಗೆ ಸಂಭಾಷಣೆಯನ್ನು ಬೆಳಿಗ್ಗೆ 11.00 ಗಂಟೆಗೆ ಕೇಳಿಸಿದ್ದಾರೆ. ಸಂಭಾಷಣೆಯನ್ನು ಕೇಳುವಾಗಲೇ ಅದರ ಬಗ್ಗೆ ದಾಖಲೆ ಮಾಡಿದ್ದಾರೆ. ಯಾವ ಯಾವ ಕ್ಲಿಪ್ಪಿನಲ್ಲಿ ಯಾವ ಯಾವ ಸಂಭಾಷಣೆ ಇತ್ತು ಎಂದು ಹೇಳಲು ಆಗುವುದಿಲ್ಲ.

6. ನಾನು 35 ವರ್ಷಗಳಿಂದ ಬಾಂಬೆಯಲ್ಲಿ ವಾಸವಾಗಿದ್ದೇನೆ. ನಾನು ಆರೋಪಿ ಜೊತೆ 2 ಬಾರಿ ಒಂದೆರೆಡು ಶಬ್ದ ಮಾತನಾಡಿದ್ದೇನೆ. ಅವುಗಳನ್ನು ಬಾಂಬೆಯಲ್ಲಿ ಮಾತನಾಡಿದ್ದೇನೆ. ಸಂಭಾಷಣೆ ಗಳಲ್ಲಿ ಯಾರ ಯಾರ ಸಂಭಾಷಣೆ ಇದೆ ಎಂದು ನಮಗೆ ವೃತ್ತ ನಿರೀಕ್ಷಕರು ಹೇಳಿರುತ್ತಾರೆ. ನಮಗೆ ಠಾಣೆಯಲ್ಲಿ ಯಾವುದೇ ಸಂಭಾಷಣೆಯನ್ನು ಕೇಳಿಸಿಲ್ಲ ಎಂದರೆ ಸರಿಯಲ್ಲ. ನಾವು ಹೋದಾಗ ಆರೋಪಿ ವೃತ್ತ ನಿರೀಕ್ಷಕರ ವಶದಲ್ಲಿದ್ದ. ಪೊಲೀಸರು ಆತನಿಗೆ ಜೋರು ಮಾಡಿ

ಅವರ ಹತೋಟಿಯಲ್ಲಿಟ್ಟುಕೊಂಡಿದ್ದರು. ಪೊಲೀಸರು ಆತನಿಗೆ ನಾವು ಹೇಳಿದ ಹಾಗೆ ಕೇಳಬೇಕೆಂದು ಹೇಳುತ್ತಿದ್ದರೂ ಎಂದರೆ ಸರಿ. ಆತನ ಬಳಿಯಿಂದ ಪೊಲೀಸರು ಏನು ತೆಗೆದುಕೊಂಡಿದ್ದಾರೆ ಗೊತ್ತಿಲ್ಲ. ನಮ್ಮ ಎದುರಲ್ಲಿ ಆರೋಪಿ ಏನು ಮಾತನಾಡಿರುವುದಿಲ್ಲ. ನಾವು ಮತ್ತು ಪೊಲೀಸರು ಸೇರಿಕೊಂಡು ಸುಳ್ಳು ದಾಖಲೆಯನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾವು ಹಿರಿಯಡ್ಕ ಠಾಣೆಯಲ್ಲಿ ಇದ್ದಾಗ ಆರೋಪಿ ಪೊಲೀಸರ ಮುಂದೆ ಏನೂ ಹೇಳಿರುವುದಿಲ್ಲ. ಸದ್ರಿ ಠಾಣೆಯಲ್ಲಿ ನಾವೆಲ್ಲಾ ಸೇರಿಕೊಂಡು ಸುಳ್ಳು ದಾಖಲೆಯನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ಯಾವುದೇ ಸ್ವಇಚ್ಛಾ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.